# ವಚನಗಳು– ಘಟ್ಟಿವಾಳಯ್ಯ

**<u>ಅ) ಸಂದರ್ಭ ಸೂಚಿಸ ವಿವರಿಸಿ:</u>**

೧. ವೇಷದಾರಿಗಳೆಲ್ಲ ನಿಮ್ಮ ಕೂಟಕ್ಕೆ ಹೊರಗು.
<u>ಆಯ್ಕೆ</u>: ಪ್ರಸ್ತುತ ವಾಕ್ಯವನ್ನು ಘಟ್ಟಿವಾಳಯ್ಯನ ವಚನದಿಂದ ಆರಿಸಿಕೊಳ್ಳಲಾಗಿದೆ.
<u>ಸಂದರ್ಭ</u>: ಕೊಲ್ಲುವ ಸಾಧನವಾದ ಆಯುಧಕ್ಕೆ ದಯೆ, ದಾಕ್ಷಿಣ್ಯಗಳಿಲ್ಲ. ವಿಷ ಸರ್ಪದ ಹಲ್ಲಿನಲ್ಲಿಅಮೃತವಿರುವುದಿಲ್ಲ. ಅಂತೆಯೇ ಶರಣರಂತೆ ವೇಷ ತೊಟ್ಟ ಭಕ್ತರು ಶರಣರ ಸಂಗದಲ್ಲಿದ್ದರೂ ಅವರ ನಿಜ ಸ್ವರೂಪ ಬದಲಾಗುವುದಿಲ್ಲ. ಅಂತವರು ನಿಜಭಕ್ತರಾಗಲು,ಶರಣರ ಸಂಗದಲ್ಲಿರಲು ಅನರ್ಹರು ಎಂದು  ಘಟ್ಟಿವಾಳಯ್ಯ ಹೇಳಿದ್ದಾರೆ.
<u>ಸ್ವಾರಸ್ಯ</u>: ವೇಷ ತೊಟ್ಟವರೆಲ್ಲ ಭಕ್ತರಾಗಲು ಸಾಧ್ಯವಿಲ್ಲವೆಂಬುದು ಈ ಮಾತಿನ ಆಶಯವಾಗಿದೆ.

೨. ಶೀಲವೆಂಬುದು ಸೂತಕ
<u>ಆಯ್ಕೆ</u>: ಪ್ರಸ್ತುತ ವಾಕ್ಯವನ್ನು ಘಟ್ಟಿವಾಳಯ್ಯನ ವಚನಗಳಿಂದ ಆರಿಸಿಕೊಳ್ಳಲಾಗಿದೆ.
ಸ<u>ಂದರ್ಭ</u>: ಜಪ–ತಪ,ಧ್ಯಾನಗಳು ಬಂಧನವಾಗಬಾರದು. ನಿಯಮ–ನಿಷ್ಠೆ, ಆಚರಣೆಗಳು ಕೇವಲ ಕಟ್ಟುಪಾಡುಗಳಾಗಬಾರದು. ಶೀಲ–ನಡವಳಿಕೆಗಳು ಯಾರನ್ನು ದೂರ ಮಾಡಬಾರದು . ಕೇವಲ ನಿಯಮ ಪಾಲನೆಯ ದೃಷ್ಟಿಯಿಂದ ನಡೆಸುವ ಆಚರಣೆ, ನಡೆ–ನುಡಿಗಳು ನಗೆಗೀಡಾಗುತ್ತವೆ.
<u>ಸ್ವಾರಸ್ಯ</u>: ನಿಯಮಗಳ ಬಂದನಕ್ಕಿಂತ ಸರಳನಡವಳಿಕೆಗಳು ಮುಕ್ಯ ಎಂದು ಘಟ್ಟಿವಾಳಯ್ಯ ಹೇಳಿದ್ದಾರೆ.

೩. ಭಾಷೆ ಹೀನರ ಕಂಡು ನಾಚಿಕೆಯಾಯಿತ್ತು.
<u>ಆಯ್ಕೆ: </u>ಪ್ರಸ್ತುತ ವಾಕ್ಯವನ್ನು ಘಟ್ಟಿವಾಳಯ್ಯನ ವಚನದಿಂದ ಆರಿಸಿಕೊಳ್ಳಲಾಗಿದೆ.
<u>ಸಂದರ್ಭ</u>: ದೇಹ ಭಾವವನ್ನು ಮರೆಯುವುದಕ್ಕೆ ಗುರುವನ್ನೂ, ಮನಸ್ಸಿನ ಶುದ್ಧತೆಗೆ ಲಿಂಗವನ್ನೂ, ಆಸೆ–ಸಂಪತ್ತಿನ ಮೋಹವನ್ನು ತೊರೆಯಲು ಜಂಗಮನನ್ನೂ ಸಾಕ್ಷಿಯಾಗಿ, ಆದರ್ಶವಾಗಿ ತೋರಿ ಮತ್ತು ಅದನ್ನೇ ಮರೆತು ಜಗದ ಕಷ್ಟದಲ್ಲಿ ಸಿಲುಕಿ ಬಡಿದಾಡುವವರನ್ನು ವಚನಭ್ರಷ್ಟರೆಂದು ಘಟ್ಟಿವಾಳಯ್ಯ ಕರೆಯುತ್ತಾರೆ
<u>ಸ್ವಾರಸ್ಯ</u>: ಆದರ್ಶಗಳು ಕೇವಲ ಉಪದೇಶಕ್ಕಾಗಿ ಮಾತ್ರ ಹೇಳುವುದಾದರೆ ಅದು ನಾಚಿಕೆಗೀಡಾಗುತ್ತದೆ. ಎಂದು ಇಲ್ಲಿ ಹೇಳಲಾಗಿದೆ.

**<u>ಆ) ಒಂದು ವಾಕ್ಯದಲ್ಲಿ ಉತ್ತರಿಸಿರಿ.</u>**

೧. ದಯೆ ಧರ್ಮದ ಮೂನೆಯಾವುದಕ್ಕೆ ಇರುವುದಿಲ?

*ಇರಿವ ಕೈದಿಂಗೆ (ಆಯುಧಕ್ಕೆ)ದಯೆ ಧರ್ಮದ ಮೊನೆ ಇರುವುದಿಲ್ಲ್ವಾ
೨. ತಪವನ್ನು ಘಟ್ಟಿವಾಳಯ್ಯ ಏನೆಂದು ಕರೆಯುತ್ತಾನೆ?
* ತಪವನ್ನು ಘಟ್ಟಿವಾಳಯ್ಯ ಬಂಧನವೆಂದು ಕರೆಯುತ್ತಾನೆ.

೩. ನಗೆಗೆ ಈಡಾಗುವುದು ಯಾವುದು?
* ನಗೆಗೆ ಈಡಾಗುವುದು ಕಟ್ಟಿನವ್ರತದ ಭಾಷೆ.

೪. ಭಾಷೆ ಹೀನರ ಕಂಡಾಗ ಏನಾಯಿತು?
*. ಭಾಷೆ ಹೀನರ ಕಂಡಾಗ ನಾಚಿಕೆಯಾಯಿತು.

೫. ಘಟ್ಟಿವಾಳಯ್ಯನ ಅಂಕಿತ ಯಾವುದು?
* ಘಟ್ಟಿವಾಳಯ್ಯನ ಅಂಕಿತ ಚಿಕ್ಕಯ್ಯಪ್ರಿಯ ಸಿದ್ಧಲಿಂಗ.

<u>ಇ)ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.</u>
೧. ಕೈದು, ಕಾಳೋರಗಗಳಿಗೆ ಏನೇನು ಇರುವುದಿಲ್ಲ?
ಉ. ಕತ್ತರಿಸಿ ಕೊಲ್ಲುವ ಕೈದಿಗೆ ದಯಧರ್ಮದ ಮೊನೆ ಇರುವುದಿಲ್ಲ. ಕಾಳೋರಗನ ದವಡೆಯಲ್ಲಿ ಅಮೃತವಿರುವುದಿಲ್ಲ.

೨. ತಗಹು ಸೂತಕಗಳು ಯಾವುವು?
ಉ. ನಿಯಮದಿಂದ ಕೂಡಿದ ವ್ರತವೇ ತಗಹು, ಶೀಲವೆಂಬುದು ಸೂತಕ.

೩. ತನುಮನ ಧನಗಳನ್ನು ಮರೆಯಲು ಏನನ್ನು ತೋರುತ್ತಾರೆ?
ಉ. ತನು ಮರೆಯಲು ಗುರುವನ್ನು, ಮನವ ಮರೆಯಲು ಲಿಂಗವನ್ನು, ಧನವ ಮರೆಯಲು ಜಂಗಮವನ್ನು ತೋರುತ್ತಾರೆ.

<u>ಏ) ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ:</u>
೧. ಘಟ್ಟಿವಾಳಯ್ಯ ವೇಷಧಾರಿಗಳನ್ನು ಕೂಟದಿಂದ ಹೊರಗು ಎನ್ನಲು ಕಾರಣಗಳೇನು?
ಉ. ಇರಿದು ಕೊಲ್ಲವ ಆಯುಧಗಳಿಗೆ ದಯೆಧರ್ಮದ ಮೊನೆ ಇರಲು ಸಾಧ್ಯವಿಲ್ಲ. ಹಾಗೆಯೇ ಭಯಂಕರವಾದ ಕಾಳಸರ್ಪದ ದವಡೆಯಲ್ಲಿ ಅಮೃತವಿರಲು ಸಾಧ್ಯವಿಲ್ಲ. ಅಂತಹವರು ಶಿವಶರಣರ ಕೂಟವನ್ನು ಸೇರಿ ಸಮಯವನ್ನು ಕಳೆದ ಮಾತ್ರದಿಂದ ಅಜಾತನಾದ ಶಿವನನ್ನು ಅರಿಯಲು ಸಾಧ್ಯವಿಲ್ಲ. ಏಕೆಂದರೆ ಕೂಟದಲ್ಲಿ ಅವರು ವ್ಯರ್ಥವಾಗಿ ಸಮಯವನ್ನು ಕಳೆದವರು. ಅಂಥವರನ್ನು ಕೂಟದಲ್ಲಿ ಸೇರಿಸಬಾರದು. ವೇಷಧಾರಿಗಳಾದ ಡಾಂಭಿಕರು ಕೂಟದಿಂದ ಹೊರಗು ಎಂದು ಘಟ್ಟಿವಾಳಯ್ಯ ಹೇಳುತ್ತ ಡಾಂಭಿಕ ಭಕ್ತರ ನಡವಳಿಕೆಗಳೆಲ್ಲ ವ್ಯರ್ಥ ಎಂದು ತಿಳಿಸಿದ್ದಾರೆ.

೨. ವ್ರತಗಳನ್ನು ಕುರಿತಂತೆ ಘಟ್ಟಿವಾಳಯ್ಯನ ನಿಲುವೇನು?
ಉ. ತಪಸ್ಸು-ಧ್ಯಾನಗಳು ಬಂಧನ. ಏಕೆಂದರೆ ಅವುಗಳಿಗೆ ನಿರ್ದಿಷ್ಟ ಆಸೆಗುರಿಗಳೆಲ್ಲ ಇರಬೇಕು. ತಪಗೆಯ್ಯಬೇಕೆಂದರೆ ಅದರ ಬಂಧನದಲ್ಲಿ ಸಿಕ್ಕಿಹಾಕಿಕೊಳ್ಳಬೇಕು. ನಿಯಮಗಳಿಂದ ಕೂಡಿದ ನೇಮ(ವ್ರತ)ಗಳನ್ನು ಆಚರಿಸುವುದಂತೂ ಇನ್ನೂ ದುಸ್ತರ. ಅವುಗಳಿಗೆ ನೂರಾರು ಕಟ್ಟುಪಾಡುಗಳು. ನಿರ್ಬಂಧಗಳಿಂದ ಕೂಡಿದ ವ್ರತದ ಭಾಷೆಯೆಂಬುದೇ ನಗೆಗೀಡಾಗುತ್ತದೆ. ಕಟ್ಟುಪಾಡುಗಳೇ ಜಗವೆಲ್ಲ ತುಂಬಿಕೊಂಡರೆ, ತೋರಿಕೆಯ ಆಚರಣೆಯೇ ಜಗವೆಲ್ಲ ತುಂಬಿಕೊಂಡರೆ ಅಜಾತನಾದ ಸಿದ್ಧಲಿಂಗನಿರಲು ಸಾದ್ಯವಿಲ್ಲ. ಆದುದರಿಂದ ಇಂತಹ ಕಟ್ಟುಪಾಡುಗಳ ಜೀವನ ಬೇಡ, ಸಾಕು ಎಂಬ ನಿಲುವಿಗೆ ಘಟ್ಟಿವಾಳಯ್ಯ ಬಂದಿದ್ದಾರೆ.

೩. ಘಟ್ಟಿವಾಳಯ್ಯನ ವಚನಗಳ ಆಶಯಗಳೇನು?
ಉ. ಘಟ್ಟಿವಾಳಯ್ಯನ  ವಚನಗಳಲ್ಲಿ ತೋರಿಕೆಯ ಭಕ್ತಿಯನ್ನು ಪ್ರದರ್ಶಿಸುವ ಡಾಂಭಿಕರ ನಡವಳಿಕೆಗಳನ್ನು ಖಂಡಿಸಿದ್ದಾರೆ. ಅಂತಹವರು ಶರಣರ  ಕೂಟದಲ್ಲಿ ಸೇರಿದರೂ ಸಹ ವ್ಯರ್ಥವಾಗಿ ಸಮಯವನ್ನು ಕಳೆಯುವುದೇ ಹೊರತು ಅವರು ಅಜಾತನಾದ ಶಿವನನ್ನು ಅರಿಯಲು ಸಾಧ್ಯವಿಲ್ಲ. ನಿಯಮ ನಿರ್ಬಂಧಗಳೆಲ್ಲವು
ನಮ್ಮನ್ನು ಇಕ್ಕಟ್ಟಿನಲ್ಲಿ ಸಿಲುಕಿಸುತ್ತವೆ. ಇಕ್ಕಟ್ಟಿನಲ್ಲಿ ಸಿಕ್ಕಿ ಒದ್ದಾಡುವುದಕ್ಕಿಂತ ಅವುಗಳನ್ನು ಬಿಟ್ಟು ಸರಳವಾಗಿ ಬದುಕಬೇಕು. ತನು-ಮನ-ಧನಗಳೆಂಬವು ಗುರು-ಲಿಂಗ-ಜಂಗಮಗಳು. ದೇಹ ಭಾವ ಮರೆಯಲು, ದೈಹಿಕ ಕಾಮನೆ ಮೀರಲು ಗುರುವು ಆದರ್ಶ. ಶುದ್ದ ಅಂತಃಕರಣವು ಲಿಂಗಕ್ಕೆ ಸಾಕ್ಷಿ. ಶುದ್ಧ
ಮನದಲ್ಲಿ ಶಿವನಿರುವನು. ಧನದ ಮದ ಹಾಗೂ ಮೋಹಗಳನ್ನು ಮರೆಯುವುದಕ್ಕೆ ಜಂಗಮರೇ ಸಾಕ್ಷಿ. ಆದರೆ ಇದನ್ನೇ ಮರೆತು ವ್ಯವಹರಿಸಿ ಕಷ್ಟಕ್ಕೆ ಈಡಾಗುವ ವಚನಭ್ರಷ್ಟರನ್ನು ಕಂಡು ನಾಚಿಕೆಯಾಗುವುದೆಂದು ಘಟ್ಟಿವಾಳಯ್ಯ ಹೇಳುತ್ತಾರೆ.

****************************************************************************